4026/5068/6028/7028

V Semester 3 Year LL.B./VI Semester 5 Year B.Com. LL.B./B.A. LL.B. (Maj.-Min. System)/B.B.A. LL.B. (Even Sem.) Examination, Aug./Sept. 2024

# COMPANY LAW

Duration : 3 Hours | Max. Marks : 80

**Instructions :** 1. **Answer all five Units.**
2. **One essay type question and short note/problems is compulsory from each Unit.**
3. **Figures to the right indicate marks.**
4. **Answer should be written either in English or Kannada completely.**

## UNIT – I

Q. No. 1. a) Define 'Company'. Explain its kinds. Marks : 10

ಕಂಪನಿಯನ್ನು ವ್ಯಾಖ್ಯಾನಿಸಿರಿ. ಕಂಪನಿಯ ಪ್ರಕಾರಗಳನ್ನು ವಿವರಿಸಿರಿ.

OR/**ಅಥವಾ**

a) State the circumstances on which the court can lift the corporate veil of the company. Answer with the help of decided cases. Marks : 10

ಯಾವ ಸಂದರ್ಭಗಳಲ್ಲಿ ನ್ಯಾಯಾಲಯವು ಕಂಪನಿಯ ಸಂಸ್ಥಾ ಸ್ವರೂಪದ ಮುಸುಕನ್ನು ತೆರವುಗೊಳಿಸಬಹುದು ಎಂಬುದನ್ನು ನಿರ್ಧರಿತ ಪ್ರಕರಣಗಳ ಸಹಾಯದೊಂದಿಗೆ ಉತ್ತರಿಸಿರಿ.

Q. No. 1. b) In a train accident all the 10 members of a private company died. Does the company cease to exist because all the members have died ? Give reasons. Marks : 6

ಒಂದು ರೈಲು ದುರಂತದಲ್ಲಿ ಖಾಸಗಿ ಕಂಪನಿಯೊಂದರ ಎಲ್ಲಾ 10 ಸದಸ್ಯರು ಸತ್ತರು. ಆ ಎಲ್ಲಾ ಸದಸ್ಯರು ಸತ್ತಿದ್ದಕ್ಕಾಗಿ ಕಂಪನಿಯು ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆಯೇ ? ಕಾರಣಗಳನ್ನು ಕೊಡಿರಿ.

OR/**ಅಥವಾ**

b) 'A' holds almost all shares except one in a Timber Company. 'A' insured the company's timber in his own name. Timber having been destroyed by fire, he claims compensation from the insurance company. Will he succeed ? Decide. Marks : 6

ಒಂದು ಮರಮುಟ್ಟ ಕಂಪನಿಯಲ್ಲಿ 'ಅ' ಎಂಬುವವನು ಒಂದು ಷೇರನ್ನು ಬಿಟ್ಟು ಮಿಕ್ಕ ಎಲ್ಲಾ ಷೇರನ್ನು ಹೊಂದಿದ್ದನು. ಈಗ 'ಅ' ಕಂಪನಿಯ ಮರಮುಟ್ಟುಗಳನ್ನು ತನ್ನ ಹೆಸರಿನಲ್ಲಿ ವಿಮೆ ಮಾಡಿಸಿದನು. ಬೆಂಕಿಯಿಂದ ಮರಮುಟ್ಟಗಳು ನಾಶವಾದಾಗ ಅವನು ವಿಮಾ ಕಂಪನಿಯಿಂದ ಪರಿಹಾರ ಕೇಳುತ್ತಾನೆ. ಅವನು ಗೆಲ್ಲುವನೇ ? ನಿರ್ಣಯಿಸಿ.

P.T.O.

Scanned with OKEN Scanner

## UNIT – II

Q. No. 2. a) Explain the fundamental clauses of Memorandum of Association of a company. Marks : 10

ಕಂಪನಿಯ ಸಂಸ್ಥಾಪನಾ ಪತ್ರದಲ್ಲಿನ ಮೂಲಭೂತ ಖಂಡಗಳನ್ನು ವಿವರಿಸಿರಿ.

OR/ಅಥವಾ

a) Define prospectus. What are the remedies available for misrepresentation in the prospectus ? Explain. Marks : 10

ಪರಿಚಯ ಪತ್ರವನ್ನು ವ್ಯಾಖ್ಯಾನಿಸಿ. ಪರಿಚಯ ಪತ್ರದಲ್ಲಿನ ತಪ್ಪು ಹೇಳಿಕೆಗಳಿಗೆ ಇರುವ ಪರಿಹಾರಗಳಾವುವು ? ವಿವರಿಸಿರಿ.

Q. No. 2. b) A company has its registered office at Mumbai. Due to some reasons unfavourable to the company, it wishes to shift its registered office to Karnataka. Advise the company. Marks : 6

ಒಂದು ಕಂಪನಿಯ ನೋಂದಾಯಿಸಿದ ಕಛೇರಿಯು ಮುಂಬಯಿಯಲ್ಲಿದೆ. ಕೆಲವೊಂದು ಪ್ರತಿಕೂಲವಾದ ಕಾರಣಗಳಿಂದಾಗಿ ಕಂಪನಿಯು ತನ್ನ ಕಛೇರಿಯನ್ನು ಕರ್ನಾಟಕಕ್ಕೆ ಸ್ಥಳಾಂತರಿಸಲು ಇಚ್ಛಿಸಿದೆ. ಕಂಪನಿಗೆ ಸಲಹೆಯನ್ನು ನೀಡಿರಿ.

OR/ಅಥವಾ

b) The Articles of the company contained a clause to the effect that 'A' should be the director and should not be removed untill 2015. He was, however removed much earlier. He brings an action against the company, for damages. Will he succeed ? Advice. Marks : 6

ಒಂದು ಕಂಪನಿಯ ನಿಯಮಾವಳಿಯ ಒಂದು ಉಪಬಂಧದಲ್ಲಿ 'ಅ' ಎಂಬುವವನನ್ನು ನಿರ್ದೇಶಕನೆಂದು ಮಾಡಬೇಕು ಹಾಗೂ 2015 ರವರೆಗೂ ಆ ಹುದ್ದೆಯಿಂದ ತೆಗೆದು ಹಾಕಬಾರದು ಎಂದಿತ್ತು. ಆದರೆ 'ಅ' ನನ್ನು ಅವಧಿಗೆ ಮೊದಲೇ ತೆಗೆದುಹಾಕಲಾಯಿತು. ಈಗ 'ಅ' ನು ಕಂಪನಿಯ ವಿರುದ್ಧ ನಷ್ಟ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ದಾವೆ ಮಾಡಿದ್ದಾನೆ. ಅವನು ಜಯಗಳಿಸಬಹುದೇ ? ಸಲಹೆ ನೀಡಿರಿ.

## UNIT – III

Q. No. 3. a) State the different kinds of meetings in a company. What is the procedure to call a meeting of the company ? Explain. Marks : 10

ಕಂಪನಿಯಲ್ಲಿ ನಡೆಯುವ ವಿವಿಧ ರೀತಿಯ ಸಭೆಗಳನ್ನು ತಿಳಿಸಿರಿ. ಕಂಪನಿಯ ಸಭೆಯನ್ನು ಕರೆಯುವ ಪ್ರಕ್ರಿಯೆ ಏನು ? ವಿವರಿಸಿರಿ.

OR/ಅಥವಾ

Scanned with OKEN Scanner

a) Discuss briefly the conditions of relief for oppression in the company. Marks : 10

ಕಂಪನಿಯಲ್ಲಿನ ದಬ್ಬಾಳಿಕೆಯ ವಿರುದ್ಧ ಇರುವ ಪರಿಹಾರದ ನಿರ್ಬಂಧನೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

Q. No. 3. b) Certain directors held a meeting of the Board. But they prevented some lawfully constituted directors from attending the meeting. A quorum was however present. Whether the Board meeting is valid ? Marks : 6

ಕೆಲವು ನಿರ್ದೇಶಕರು ಮಂಡಳಿಯ ಸಭೆಯನ್ನು ನಡೆಸುತ್ತಾರೆ. ಆದರೆ ಅವರು ಕೆಲವು ಕಾನೂನುಬದ್ಧ ಮಂಡಳಿಯ ನಿರ್ದೇಶಕರು ಸಭೆಗೆ ಹಾಜರಾಗುವುದನ್ನು ತಡೆಯುತ್ತಾರೆ. ಆದಾಗ್ಯೂ ಸಭೆಯಲ್ಲಿ ಕೋರಂ ಇರುತ್ತದೆ. ಮಂಡಳಿಯ ಸಭೆಯು ಕಾನೂನುಬದ್ಧವೇ ?

OR/ಅಥವಾ

b) A Director, refused to retire in accordance with Articles of Association and illegally continued in the office. A member of the company wants to file a suit in his individual capacity against the director. Advise him. Marks : 6

'ಅ' ಎಂಬ ನಿರ್ದೇಶಕನು, ಕಂಪನಿಯ ಲಿಖಿತ ಕಟ್ಟಳೆಗಳ ನಿಯಮಾವಳಿಗಳ ಪ್ರಕಾರ ನಿವೃತ್ತಿಯಾಗಲು ತಿರಸ್ಕರಿಸುತ್ತಾನೆ. ಕಂಪನಿಯ ಒಬ್ಬ ಸದಸ್ಯನು, ತನ್ನ ವೈಯಕ್ತಿಕ ಸಾಮರ್ಥ್ಯದ ಆಧಾರದಲ್ಲಿ ನಿರ್ದೇಶಕನ, ವಿರುದ್ಧ ದಾವೆ ಮಾಡಬಯಸುತ್ತಾನೆ. ಅವನಿಗೆ ಸಲಹೆಯನ್ನು ಕೊಡಿರಿ.

## UNIT – IV

Q. No. 4. a) Describe the general principles and statutory restrictions for the allotment of shares. Marks : 10

ಷೇರುಗಳ ಹಂಚಿಕೆಯ ಕುರಿತಾದ ಸಾಮಾನ್ಯ ನಿಯಮಗಳು ಮತ್ತು ಶಾಸನಬದ್ಧವಾದ ನಿಬಂಧನೆಗಳನ್ನು ವಿವರಿಸಿರಿ.

OR/ಅಥವಾ

a) What is debenture ? Explain its characteristics along with various kinds of debenture. Marks : 10

ಸಾಲಪತ್ರ ಎಂದರೇನು ? ವಿವಿಧ ರೀತಿಯ ಸಾಲಪತ್ರಗಳೊಂದಿಗೆ ಅದರ ಲಕ್ಷಣಗಳನ್ನು ವಿವರಿಸಿರಿ.

Q. No. 4. b) 'N' a minor was registered as a share holder. After attaining majority he received dividends from the company. Subsequently the company went into liquidation. 'N' denies liability as a shareholder. Decide. Marks : 6

'N' ಎಂಬ ಅಪ್ರಾಪ್ತ ವಯಸ್ಕನು ಒಂದು ಕಂಪನಿಯ ಷೇರುದಾರನಾಗಿ ನೋಂದಾಯಿಸಲ್ಪಟ್ಟನು. ತದನಂತರ ಪ್ರಾಪ್ತ ವಯಸ್ಕನಾದ ಬಳಿಕ ಕಂಪನಿಯಿಂದ ಲಾಭಾಂಶವನ್ನು ಸ್ವೀಕರಿಸುತ್ತಾನೆ. ನಂತರ ಕಂಪನಿಯು ಸಮಾಪನೆಯಾಗುತ್ತದೆ. ಈಗ 'N' ನು ತನ್ನ ಹೊಣೆಗಾರಿಕೆಯನ್ನು ಅಲ್ಲಗಳೆಯುತ್ತಾನೆ. ನಿರ್ಧರಿಸಿರಿ.

OR/ಅಥವಾ

Scanned with OKEN Scanner

b) 'A' was the trasferee of a share certificate issued under the seal of 'B' company. The certificate was issued by the company secretary, who had affixed the seal of the company and forged the signature of two directors. Whether the share certificate is valid ? Advice him. Marks : 6

'ಅ' ಎಂಬುವವನು 'ಬ' ಎಂಬ ಕಂಪನಿಯ ಸೀಲ್ ಅಡಿಯಲ್ಲಿ ಬಿಡುಗಡೆ ಮಾಡಿದ ಷೇರ್ ಸರ್ಟಿಫಿಕೇಟ್‌ನ್ನು ವರ್ಗಾವಣೆ ಪಡೆದವನು. ಷೇರ್ ಸರ್ಟಿಫಿಕೇಟ್‌ನ್ನು ಕಂಪನಿಯ ಕಾರ್ಯದರ್ಶಿಯು ಇಬ್ಬರು ನಿರ್ದೇಶಕರ ಖೊಟ್ಟಿ ಸಹಿಯೊಂದಿಗೆ ಕಂಪನಿಯ ಮೊಹರಿನೊಂದಿಗೆ ಬಿಡುಗಡೆ ಮಾಡಿರುತ್ತಾನೆ. ಈ ಷೇರು ಸರ್ಟಿಫಿಕೇಟ್ ಕಾನೂನುಬದ್ಧವೇ ? ಸಲಹೆ ನೀಡಿ.

## UNIT – V

Q. No. 5. a) When a National Company Law Tribunal can order for winding up of a company ? Explain. Marks : 10

ಯಾವ ಸಂದರ್ಭಗಳಲ್ಲಿ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣವು ಒಂದು ಕಂಪನಿಯನ್ನು ಸಮಾಪನೆಗೊಳಿಸಲು ಆಜ್ಞೆ ಮಾಡಬಲ್ಲದು ? ವಿವರಿಸಿರಿ.

OR/ಅಥವಾ

a) What are the powers and duties of tribunal with respect to reconstruction and amalgamation of a company ? Explain. Marks : 10

ಕಂಪನಿಯ ಪುನರ್ ನಿರ್ಮಾಣ ಮತ್ತು ಒಗ್ಗೂಡುವಿಕೆಗೆ ಸಂಬಂಧಿಸಿದಂತೆ ನ್ಯಾಯಾಧಿಕರಣಕ್ಕಿರುವ ಅಧಿಕಾರಗಳು ಮತ್ತು ಕರ್ತವ್ಯಗಳು ಯಾವುವು ? ವಿವರಿಸಿರಿ.

Q. No. 5. b) Due to Covid – 19 Lockdown and subsequent developments 'A' company suspends its business for more than one year. A shareholder in that company submits an application to the court for its winding up. Will he succeed ? Marks : 6

ಕೋವಿಡ್ – 19 ಲಾಕ್‌ಡೌನ್ ಹಾಗೂ ನಂತರದ ಬೆಳವಣಿಗೆಗಳಿಂದ 'ಅ' ಎಂಬ ಕಂಪನಿಯು ತನ್ನ ವ್ಯವಹಾರವನ್ನು ಒಂದು ವರ್ಷಕ್ಕಿಂತಲೂ ಹೆಚ್ಚು ಅವಧಿಗೆ ಅಮಾನತುಗೊಳಿಸಿತ್ತು. ಕಂಪನಿಯ ಷೇರುದಾರನೊಬ್ಬನು ಈ ಕಾರಣದ ಮೇಲೆ ಕಂಪನಿಯ ಸಮಾಪನೆಗಾಗಿ ನ್ಯಾಯಾಲಯಕ್ಕೆ ಒಂದು ಅರ್ಜಿಯನ್ನು ಸಲ್ಲಿಸಿದ್ದಾನೆ. ಅವನು ಗೆಲ್ಲುವನೇ ?

OR/ಅಥವಾ

b) 'X' had subscribed the M.O.A. of a company for 100 shares. The company was duly registered but ultimately he took only 10 shares. The company was wind up. What is the extent of 'X' s liability ? Marks : 6

'X' ಎಂಬುವವನು ಒಂದು ಕಂಪನಿಯ ಸಂಸ್ಥಾಪನಾ ಪತ್ರಕ್ಕೆ 100 ಷೇರುಗಳಿಗೆ ತನ್ನ ಹೆಸರನ್ನು ನೋಂದಾಯಿಸಿದ್ದನು. ಆ ಕಂಪನಿಯು ನಂತರದಲ್ಲಿ ನೋಂದಾಯಿಸಲ್ಪಟ್ಟಿತ್ತು. ಆದರೆ 'X' ನು ಕೇವಲ 10 ಷೇರುಗಳನ್ನು ಮಾತ್ರ ಖರೀದಿಸಿದನು. ನಂತರ ಕಂಪನಿಯು ಸಮಾಪನೆಗೊಳ್ಳುತ್ತದೆ. 'X' ನ ಜವಾಬ್ದಾರಿಯ ಮೇರೆ ಏನು ?

Scanned with OKEN Scanner